## ವ್ಯಾಲಿ ಆಫ್ ಫ್ಲವರ್ಸ್

ಅ. 3 ಸಂಚಿಕೆಯಲ್ಲಿ ಪ್ರಕಟವಾದ 'ದೇವರು ಮಾಡಿದ ಹೂಗುಚ್ಛ' ಲೇಖನ ಓದುವಾಗ ನನಗೆ ಹಿಂದೆ ನನ್ನ ಗೆಳೆಯರೊಬ್ಬರು ಅಲ್ಲಿಗೆ ಹೋಗಿ ಬಂದು ನನ್ನೊಡನೆ ಹಂಚಿಕೊಂಡ ಮಾತುಗಳು ನೆನಪಾದವು. ಅವರು ಹೇಳಿದುದನ್ನು ಕೇಳಿ ಅಲ್ಲಿಗೆ ಹೋಗುವ ಬಗ್ಗೆ ಕನಸು ಕಂಡೆ. ಆದರೆ ಈಗಲೂ ನನಸಾಗಲಿಲ್ಲವಲ್ಲ ಎಂಬುದೇ ಬೇಸರದ ಸಂಗತಿ.

—ಪಿ. ವಾಸುದೇವ ಭಟ್, ಬುಡ್ನಾರು

## ನಿರಾಸೆಗೊಳಿಸಿದ ಲೇಖನ

ಸೆ. 26ರ ಸಂಚಿಕೆಯಲ್ಲಿ ನರೇಂದ್ರ ರೈ ದೇರ್ಲ ಬರೆದ 'ಊಟವೋ ವಿಷವೋ'ಲೇಖನವನ್ನು ಬಹಳ ಆಸಕ್ತಿಯಿಂದ ಓದಿದೆ. ದೊರಕಿದ್ದು ನಿರಾಸೆ. ಎಲ್ಲ ವ್ಯವಸಾಯಗಳಲ್ಲಿಯೂ ಗೊಬ್ಬರ, ಕೀಟನಾಶಕ ಬಳಸುತ್ತಾರೆ ಮತ್ತು ಅವು ವಿಷ ಎನ್ನುವುದನ್ನೇ ಪದೇ ಪದೆ ಬರೆದಿದ್ದಾರೆಯೇ ಹೊರತು, ಅವು ಯಾವ ರೀತಿಯಲ್ಲಿ ವಿಷ, ಹೇಗೆ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ ಎಂಬ ವಿಮರ್ಶೆ ಮಾಡಿಲ್ಲ. ಇದಕ್ಕೆ ಜನಸಾಮಾನ್ಯರು, ರೈತರು, ಸರ್ಕಾರ ಯಾವ ಕ್ರಮಗಳನ್ನು ಅನುಸರಿಸಬೇಕು ಎಂಬ ಸಲಹೆ, ಮಾರ್ಗೋಪಾಯಗಳನ್ನು ಲೇಖನದಲ್ಲಿ ಸೂಚಿಸಿಲ್ಲ.

—ಶಶಿಧರ ಎಚ್.ಎನ್.

'ಊಟವೋ ವಿಷವೋ' ಲೇಖನ, ನಾವು ತಿನ್ನುವ ಆಹಾರದ ವಾಸ್ತವತೆಯನ್ನು ಮನದಟ್ಟು ಮಾಡುವಂತಹದ್ದಾಗಿತ್ತು. ನಗರವಾಸಿಗಳಿಗಷ್ಟೇ ಸೀಮಿತವಾಗಿರದೆ ಗ್ರಾಮಾಂತರ ಜನರೂ ಗಂಭೀರವಾಗಿ ಚಿಂತಿಸಬೇಕಾದ ಸಂಗತಿ ಇದು. ಕನಿಷ್ಠ ಪಕ್ಷ ಪ್ರಮಾಣದ ಅರಿವಿಲ್ಲದೆಯೇ ಆಹಾರದಲ್ಲಿ ವಿಷ ಬೆರೆಸುವವರಿಗಾದರೂ ತಿಳಿವಳಿಕೆ ನೀಡುವ ಪ್ರಯತ್ನವಾಗಬೇಕು.

—ವಾಣಿ ರಘು, ಎ.ಕೆ. ಪಟ್ಟಾಭಿ, ಎ.ಕೆ. ಅನಂತಮೂರ್ತಿ, ಬೆಂಗಳೂರು, ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

## ಯೋಗಕ್ಕೆ ಅಂಟಿಕೊಳ್ಳುವ ಆಸೆಯಾಗಿದೆ

ಸೆ. 26ರ ಸಂಚಿಕೆಯಲ್ಲಿ ಗೋಪಾಲಕೃಷ್ಣ ದೇಲಂಪಾಡಿ ಬರೆದ 'ಟೆನ್ಷನ್ ಬಿಡಿ ಯೋಗ ಮಾಡಿ' ಲೇಖನ ತುಂಬಾ ಚೆನ್ನಾಗಿತ್ತು. ನಾನು ಮತ್ತು ನನ್ನ ಮಗಳು ಯೋಗಕ್ಕೆ ಹೋಗುತ್ತೇವೆ. ಯೋಗ ಒಳ್ಳೆಯದು ಎಂದು ಮಾತ್ರ ಗೊತ್ತಿತ್ತು. ಆದರೆ ಈ ಲೇಖನ ಓದಿ ಯಾಕೆ ಒಳ್ಳೆಯದು, ಯಾವುದಕ್ಕೆ ಒಳ್ಳೆಯದು ಎಂಬುದೂ ತಿಳಿಯಿತು.

—ಅರ್ಪಣಾ ಸ್ವರೂಪ್

## ವಾಹ್! ಮನೀಷಾ

ಸೆ. 12ರ ಸಂಚಿಕೆಯ 'ಸವಿ ಸವಿ' ಪುಟದಲ್ಲಿ ಮನೀಷಾ ಪಾಟೀಲ್ ನೆನಪುಗಳು ಸೊಗಸಾಗಿದ್ದವು. ಅದಕ್ಕೆ ಇಂಬು ಕೊಟ್ಟಂತೆ ಭಾವಚಿತ್ರವೂ ಆಕರ್ಷಕವಾಗಿ ಮೂಡಿ ಬಂದಿದೆ.

—ಬಸುದೇವಿ ಭಾವಿ, ಗದಗ

## ಗಾಂಧಿ ಪ್ರೀತಿ ಹೀಗೆಯೇ ಇರಲಿ

ಅ.3 ರ ಸಂಚಿಕೆಯಲ್ಲಿ ಪಿ. ಶೇಷಾದ್ರಿ ಬರೆದಿರುವ 'ಮೋಹನದಾಸ ಸಿನಿಮಾ ನಾನೇಕೆ ಮಾಡಿದೆ?' ಲೇಖನ ಸುಂದರವಾಗಿದೆ. ನಮ್ಮ ಗಾಂಧಿಯ ಬಗ್ಗೆ ಪ್ರೀತಿಯಿಂದ ಮಾತನಾಡುವ ಮನುಷ್ಯರು ಈಗಲೂ ಇದ್ದಾರೆ ಎನ್ನುವುದು ನಿಜಕ್ಕೂ ನನಗೆ ಅಚ್ಚರಿಯ ಸಂಗತಿ. ಲೇಖಕರೇ, ದಯವಿಟ್ಟು ಹೀಗೆಯೇ ಬರೆಯುತ್ತಿರಿ. ಎರಡು ತಿಂಗಳ ಹಿಂದೆ ಚೌಡಯ್ಯ ಸ್ಮಾರಕ ಭವನದಲ್ಲಿ ಗಾಂಧಿ ಕುರಿತಾಗಿ ಇರುವ ಒಂದು ನಾಟಕ ನೋಡಿದೆ. ನಾಟಕದ ಕೊನೆಯಲ್ಲಿ ಪ್ರೇಕ್ಷಕರು ಅಳಲು ಶುರುಮಾಡಿದರು. ಗಾಂಧಿ ಮೌಲ್ಯಗಳಿಗೆ ಬೆಲೆ ಕೊಡುವ ಜನರು ಈಗಲೂ ಇದ್ದಾರೆ ಎಂದು ನನಗೆ ಆಗಲೇ ತಿಳಿಯಿತು.

—ಕೌಸಲ್ಯಾ ಜಾಗಿರದಾರ್

'ಮೋಹನದಾಸ...' ಲೇಖನ ಓದುತ್ತಾ ಕಣ್ಣು ಮಂಜಾಗಿ ಕಣ್ಣೊರೆಸಿಕೊಂಡೆ. ಈ ಲೇಖನವು, ತಮ್ಮ ಚಿತ್ರದ ನಿರ್ಮಾಣದ ಪರಿಶ್ರಮದ ಜೊತೆಜೊತೆಗೆ ಜನತೆ ಮರೆತಂತೆ ಇರುವ ಬಾಪು ಅವರ ಆದರ್ಶಗಳ ಕುರಿತು ಮತ್ತೊಮ್ಮೆ ಚಿಂತಿಸುವಂತೆ ಮಾಡಿದವು.

—ಉಷಾ ರಾಣಿ



## ಜ್ಞಾನ ಜಗತ್ತು

2019 ಸೆಪ್ಟೆಂಬರ್ 12ರ 'ಸುಧಾ' ವಾರಪತ್ರಿಕೆಯಲ್ಲಿ ಎಂದಿನಂತೆ ಓದಿದಾಗ ಎನ್. ವಾಸುದೇವ್ ಇವರ ಖಗೋಲ, ಭೂಗೋಲ, ಜೀವಜಾಲಗಳ ಕುರಿತು ಓದುವಾಗ ಮೈ ಮನಸ್ಸು ಮರೆಯುತ್ತೇನೆ. ಇದನ್ನು ಬರೆಯುವ ಎನ್. ವಾಸುದೇವರಿಗೆ ಅಭಿನಂದನೆ.

—ಬಾ.ನಾ. ಸೊಲ್ಲಾಪುರೆ, ಬೀದರ್

ಸೆ.26ರ ಸಂಚಿಕೆಯ 'ನಿಮ್ಮೊಡನೆ'ಯಲ್ಲಿ ರಘುನಾಥ ಚ.ಹ., ಮಕ್ಕಳು ಬಾಲ್ಯವನ್ನು ಕಳೆದುಕೊಳ್ಳುತ್ತಿರುವ ಬಗ್ಗೆ ವ್ಯಕ್ತಪಡಿಸಿರುವ ಕಳವಳ ಅರ್ಥಪೂರ್ಣವಾದದ್ದು. ಇಂದು ಪ್ರಕೃತಿ, ವಿಕೃತಿಯಾಗಿರುವುದರಿಂದ ಅದರ ನೇರ ಪರಿಣಾಮ ಮಹಿಳೆಯರು, ಮಕ್ಕಳು ಹಾಗೂ ದುಡಿಯುವ ವರ್ಗದ ಮೇಲಾಗಿದೆ. ಟೀವಿ, ಮೊಬೈಲ್, ಕಂಪ್ಯೂಟರ್‌ಗಳ ಜೊತೆಯೇ ಬೆಳೆದ ಮಕ್ಕಳಲ್ಲಿ ಬಾಲ್ಯ ಸಹಜ ಕುತೂಹಲ ಸಂಪೂರ್ಣವಾಗಿ ಮಾಯವಾಗಿದೆ. ಗತದಿನದ ಮಕ್ಕಳಲ್ಲಿದ್ದ ಹವ್ಯಾಸಗಳಾದ 'ಚಂದಮಾಮ, ಕಾಮಿಕ್ ಪುಸ್ತಕಗಳು, ಸರ್ಕಸ್, ಜೂ, ಪ್ರೇಕ್ಷಣೀಯ ಸ್ಥಳಗಳ ಪ್ರವಾಸ, ಸ್ಟಾಂಪ್ ಸಂಗ್ರಹ, ನಾಣ್ಯಗಳ ಸಂಗ್ರಹ, ಕಲೆ, ಮ್ಯೂಸಿಕ್, ಆಟಗಳು ಎಲ್ಲವನ್ನೂ ನರ್ಸರಿ, ಪ್ರೈಮರಿ, ಶಿಕ್ಷಣೋದ್ಯಮಗಳು ಹಾಗೂ 'ಅಂಕವೀರರನ್ನು' ಉತ್ಪಾದಿಸುವ ಶಿಕ್ಷಣ ಕಾರ್ಖಾನೆಗಳು ಹಾಗೂ ವೃತ್ತಿಪರ ಕೋರ್ಸ್‌ಗಳ ಗುತ್ತಿಗೆ ಹಿಡಿದಿರುವ ಪ್ರವೇಶ ಪರೀಕ್ಷೆ, ಟ್ಯುಟೋರಿಯಲ್‌ಗಳು ಕಸಿದುಕೊಂಡಿದೆ. ಮಾತೃಭಾಷೆಯನ್ನು 'ಪ್ರತಿಷ್ಠಿತ' ಶಾಲೆಗಳು ಹೊಸಕಿ ಹಾಕಿವೆ.

—ಕೆ. ಪ್ರಕಾಶ್, ಬಾಳೆಹೊನ್ನೂರು

## ಮನಸ್ಸಿನ ಆಳದಲ್ಲಿ ಪಾತಾಳಗರಡಿ

ಸೆ. 26ರ ಸಂಚಿಕೆಯಲ್ಲಿ ಪ್ರಕಟವಾದ ಸತ್ಯಬೋಧ ಅವರ ಕಥೆ 'ಹಾವು ಬಂತು ಹಾವು' ಚೆನ್ನಾಗಿದೆ. ಹಾವಾಡಿಗ ಹಾವು ಹಿಡಿಯುವ ಭಾವ ಭಂಗಿ, ಮನೆಯವರ 'ಹಾಯ್' ಎನ್ನುವ ನಿರಾಳ ಮತ್ತು ಕೈತುಂಬಾ ಹಣ ಕೊಡುವುದು, ಹಾವಾಡಿಗನ ಮೋಸದಾಟ ಹಾವು ನೋಡಿ ಬೆಚ್ಚಿ ಓಡುವ ಖಡಕ್ ಪೊಲೀಸ್ ಅಧಿಕಾರಿ... ಹೀಗೆ ಕಥೆ ಕಣ್ಣ ಮುಂದೆ ಬಿಚ್ಚಿಕೊಳ್ಳುತ್ತದೆ. ಮನಸ್ಸಿನ ತೊಳಲಾಟದ ಬಿಡುಗಡೆಯನ್ನು ಕಥೆಗಾರರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

—ಸುಷ್ಮಾ ನರಸಿಂಹ, ಬೆಂಗಳೂರು



## ಏನೆಲ್ಲ!

'ಸಿನಿಮಾ ಅಂದ್ರೆ ಸುಮ್ನೇನಾ?' (ಸೆ. 26 ಸಂಚಿಕೆಯಲ್ಲಿ ಮಾಸ್ತಿ ಬರೆದ ಲೇಖನ). 'ಸುಮ್ನೇ' ಎಂದು ಯಾರು ಹೇಳಿದರು? ಹಾಡು, ಕುಣಿತ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಅಪ್ಪರೆಯರು!

—ಸಿಪಿಕೆ, ಮೈಸೂರು

'ಸಿನಿಮಾ ಅಂದ್ರೆ ಸುಮ್ನೇನಾ' ಲೇಖನ ಚೆನ್ನಾಗಿತ್ತು. ಸಿನಿಮಾ ಕ್ಷೇತ್ರ, ನಟ–ನಟಿಯರ ಏಳುಬೀಳುಗಳ ನಡುವೆಯೂ ಅಭಿವೃದ್ಧಿ ಹೊಂದಲಿ. ದೇಶಕ್ಕೆ ಮಾದರಿ ಪೂರಕವಾಗಿ ಬೆಳೆಯಲಿ.

– ಡಿ.ಎಲ್. ಚಂದ್ರಿಕಾ, ಬಳ್ಳಾರಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in